## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2176 |
| 2. | ಸದಸ್ಯರ ಹೆಸರು | : ಶ್ರೀ ಶರವಣ ಟಿ.ಎ. |
| 3. | ಉತ್ತರಿಸಬೇಕಾದ ದಿನಾಂಕ | : 26.03.2026 |
| 4. | ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2025-26ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾವಿತ ಅನುದಾನ ಹಾಗೂ ಬಿಡುಗಡೆ ಮಾಡಿದ ಅನುದಾನವೆಷ್ಟು (ಜನವರಿ-2026ರ ಅಂತ್ಯದ ವರೆಗೆ ಇಲಾಖಾವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು) | 2025-26ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗಧಿಪಡಿಸಲಾದ ಅನುದಾನ ಮತ್ತು 31ನೇ ಜನವರಿ 2026ರ ಅಂತ್ಯಕ್ಕೆ ಮಹಾಲೇಖಪಾಲರ ಲೆಕ್ಕದನ್ವಯ ವೆಚ್ಚವಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | 2026ರ ಜನವರಿ ಅಂತ್ಯಕ್ಕೆ ಎಲ್ಲಾ ಇಲಾಖೆಗಳು ಖರ್ಚು ಮಾಡಿದ ಮೊತ್ತ ಹಾಗೂ ಉಳಿಕೆ ಮೊತ್ತವೆಷ್ಟು (ಇಲಾಖಾವಾರು ಪ್ರತ್ಯೇಕ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಲು ಕೈಗೊಂಡಿರುವ ಯೋಜನೆಗಳಿಗೆ ಅನುದಾನವನ್ನು ಅಂದಾಜಿಸಿ ವಿವಿಧ ಇಲಾಖೆಗಳಿಗೆ ಲೆಕ್ಕಶೀರ್ಷಿಕವಾರು ನಿಗದಿಪಡಿಸಲಾಗುತ್ತದೆ. |
| ಇ | ಸರ್ಕಾರದ ಹಲವು ಇಲಾಖೆಗಳಲ್ಲಿ ಅನುದಾನ ಬಾಕಿ ಉಳಿಯಲು ಕಾರಣಗಳೇನು; ಉಳಿಕೆ ಅನುದಾನವನ್ನು ಯಾವ ಕಾಲ ಮಿತಿಯಲ್ಲಿ ಖರ್ಚು ಮಾಡಲಾಗುವುದು? | ಈ ರೀತಿ ನಿಗಧಿಪಡಿಸಿದ ಮೊತ್ತಕ್ಕೆ ಅನುಗುಣವಾಗಿ ಆರ್ಥಿಕ ಇಲಾಖೆಯು ತ್ರೈಮಾಸಿಕವಾಗಿ ಹೊರಡಿಸುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಆದೇಶದನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅಂದರೆ, ಇಲಾಖಾ ಕಾರ್ಯದರ್ಶಿಗಳ ಹಂತದಲ್ಲಿ, ಮುಖ್ಯ ನಿಯಂತ್ರಣಾಧಿಕಾರಿಗಳ ಹಂತದಲ್ಲಿ ಮತ್ತು ನಿಯಂತ್ರಣಾಧಿಕಾರಿಗಳ ಹಂತದಲ್ಲಿ ಅನುದಾನ ಬಿಡುಗಡೆಗೆ ಆದೇಶಗಳನ್ನು ಹೊರಡಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತವೆ. ಆದ್ದರಿಂದ, ಬಿಡುಗಡೆಯಾಗುವ ಅನುದಾನದ ಮಾಹಿತಿ ಆರ್ಥಿಕ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.<br><br>ಆಯವ್ಯಯದಲ್ಲಿ ಪ್ರತಿ ಇಲಾಖೆಗೆ ಯೋಜನೆವಾರು ಅನುದಾನಗಳನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಹಂಚಿಕೆ ಮಾಡಲಾದ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಬಳಸಿಕೊಳ್ಳಲು ಎಲ್ಲಾ ಆಡಳಿತ ಇಲಾಖೆಗೆ ಸೂಚಿಸಲಾಗಿರುತ್ತದೆ.<br><br>ಆರ್ಥಿಕ ಇಲಾಖೆಯಿಂದ ಇಲಾಖೆಗಳಿಗೆ ಅನುದಾನದ ಬಳಕೆ ಮಾಡಲು ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.<br><br>ಯಾವುದೇ ಆರ್ಥಿಕ ವರ್ಷದಲ್ಲಿ ರಾಜ್ಯವಲಯದಡಿ ಬಿಡುಗಡೆಯಾದ ಮೊತ್ತದಲ್ಲಿ ಲೆಕ್ಕ ಶೀರ್ಷಿಕೆವಾರು ಖರ್ಚಾಗದೇ ಉಳಿದ ಅನುದಾನವು ವ್ಯಪಗತವಾಗಿರುತ್ತದೆ.<br><br>ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಆಗುವ ಉಳಿತಾಯವನ್ನು ಸಂಚಿತ ನಿಧಿಗೆ ಜಮ ಎಂದು ಪರಿಗಣಿಸಲಾಗುವುದು. |

**ಸಂಖ್ಯೆ: ಆಇ 44 ಬಿಜಿಎಲ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ

| 2025-26ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಲಾದ ಅನುದಾನ ಮತ್ತು ವೆಚ್ಚದ ವಿವರಗಳು | | | |
|---|---|---|---|
| | | | (ರೂ. ಕೋಟಿಗಳಲ್ಲಿ) |
| ಕ್ರ.ಸಂ. | ಇಲಾಖೆಗಳು | 2025-26ನೇ ಸಾಲಿನ ಆಯವ್ಯಯ ಅಂದಾಜು | 2025-26ನೇ ಸಾಲಿನ ಲೆಕ್ಕ (31ನೇ ಜನವರಿ 2026ರ ಅಂತ್ಯಕ್ಕೆ |
| 1 | ಕೃಷಿ | 5044.50 | 3430.72 |
| 2 | ತೋಟಗಾರಿಕೆ | 1532.38 | 1120.60 |
| 3 | ರೇಷ್ಮೆ | 417.35 | 294.13 |
| 4 | ಪಶುಸಂಗೋಪನೆ | 3342.28 | 2793.53 |
| 5 | ಮೀನುಗಾರಿಕೆ | 421.06 | 243.20 |
| 6 | ಆರ್ಥಿಕ | 44604.10 | 29282.99 |
| 7 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 1855.47 | 984.71 |
| 8 | ಇ - ಆಡಳಿತ | 112.80 | 71.66 |
| 9 | ಒಳಾಡಳಿತ | 13045.37 | 9547.37 |
| 10 | ಸಾರಿಗೆ | 7379.81 | 4784.27 |
| 11 | ಮೂಲಭೂತ ಸೌಕರ್ಯ | 1033.12 | 795.03 |
| 12 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 25439.55 | 9468.49 |
| 13 | ಅರಣ್ಯ | 2290.67 | 1739.77 |
| 14 | ಪರಿಸರ ಮತ್ತು ಜೀವಿಶಾಸ್ತ್ರ | 18.64 | 8.09 |
| 15 | ಸಹಕಾರ | 2389.70 | 1645.35 |
| 16 | ಪರಿಶಿಷ್ಟ ಜಾತಿಗಳ ಕಲ್ಯಾಣ | 6021.75 | 3807.76 |
| 17 | ಪರಿಶಿಷ್ಟ ಪಂಗಡಗಳ ಕಲ್ಯಾಣ | 2080.54 | 1190.74 |
| 18 | ಹಿಂದುಳಿದ ವರ್ಗಗಳ ಕಲ್ಯಾಣ | 4013.83 | 2650.29 |
| 19 | ಅಲ್ಪಸಂಖ್ಯಾತರ ಕಲ್ಯಾಣ | 4514.80 | 2314.55 |
| 20 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 34184.41 | 17127.69 |
| 21 | ವಾರ್ತಾ | 209.19 | 175.11 |
| 22 | ಪ್ರವಾಸೋದ್ಯಮ | 284.23 | 135.55 |
| 23 | ಯುವಜನ ಸೇವೆಗಳು | 276.17 | 170.21 |
| 24 | ಆಹಾರ ಮತ್ತು ನಾಗರೀಕ ಸರಬರಾಜು | 8274.36 | 5230.15 |
| 25 | ಕಂದಾಯ | 15662.25 | 12546.90 |
| 26 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 1078.50 | 351.36 |
| 27 | ಉನ್ನತ ಶಿಕ್ಷಣ | 5858.27 | 4300.14 |
| 28 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 34437.56 | 31552.35 |
| 29 | ಕೈಮಗ್ಗ ಮತ್ತು ಜವಳಿ | 498.69 | 346.45 |
| 30 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 1229.51 | 867.12 |
| 31 | ಸಣ್ಣ ಕೈಗಾರಿಕೆ | 757.03 | 355.01 |
| 32 | ಗಣಿ | 118.64 | 60.39 |
| 33 | ನಗರಾಭಿವೃದ್ಧಿ | 16507.57 | 12037.27 |
| 34 | ವಸತಿ | 3128.96 | 1464.58 |
| 35 | ಲೋಕೋಪಯೋಗಿ | 9840.45 | 6362.37 |
| 36 | ಭಾರಿ ನೀರಾವರಿ | 18826.93 | 9131.32 |
| 37 | ಸಣ್ಣ ನೀರಾವರಿ | 3344.05 | 1644.73 |
| 38 | ವೈದ್ಯಕೀಯ ಶಿಕ್ಷಣ | 4986.51 | 3460.53 |
| 39 | ಆರೋಗ್ಯ | 12032.48 | 7955.23 |
| 40 | ಕಾರ್ಮಿಕ | 901.04 | 411.62 |
| 41 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 2377.43 | 1572.90 |
| 42 | ಇಂಧನ | 26896.18 | 21713.92 |
| 43 | ಕನ್ನಡ ಮತ್ತು ಸಂಸ್ಕೃತಿ | 274.80 | 169.39 |
| 44 | ಯೋಜನೆ, ಸಾಂಖ್ಯಿಕ , ವಿಜ್ಞಾನ ಮತ್ತು ತಂತ್ರಜ್ಞಾನ | 3903.18 | 550.42 |
| 45 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 2536.51 | 1785.11 |
| 46 | ಸಂಸದೀಯ ವ್ಯವಹಾರಗಳು | 491.91 | 353.18 |
| 47 | ಋಣ ಮೇಲುಸ್ತುವಾರಿ | 75074.71 | 51563.39 |
| | ಒಟ್ಟು | **409549.24** | **269567.64** |